**ದಿನಾಂಕ: 20.06.2024 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**:ಪಾಟೀ ಸವಾಲುಃ 1, 5 ಮತ್ತು 6 ನೇ ಪ್ರತಿವಾದಿ ಪರ ಶ್ರೀ.ಕೆ ಬಿ ಡಿ ವಕೀಲರಿಂದ :**

ನನ್ನ ತಂದೆಗೆ ಇಬ್ಬರು ಹೆಂಡತಿಯರು ಇದ್ದು, ಮೊದಲನೇ ಹೆಂಡತಿ ಯಾವಾಗ ಮೃತಪಟ್ಟರು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯ ಮೊದಲನೇ ಹೆಂಡತಿಗೆ 1 ನೇ ಪ್ರತಿವಾದಿ ಒಬ್ಬನೇ ಮಗನಾಗಿರುತ್ತಾನೆ. ವಾದಿಯರು ಮತ್ತು 2 ಮತ್ತು 3 ನೇ ಪ್ರತಿವಾದಿಯರು ನನ್ನ ತಂದೆಯ ಎರಡನೇ ಹೆಂಡತಿಯ ಮಕ್ಕಳುಗಳು ಆಗಿರುತ್ತಾರೆ. ನನ್ನ 2 ಮತ್ತು 3 ನೇ ವಾದಿಯರ ಮದುವೆ ಬಹಳ ವರ್ಷಗಳ ಹಿಂದೆ ಆಗಿದ್ದು ನಮ್ಮ ಗಂಡಂದಿರ ಮನೆಯಲ್ಲಿ ವಾಸವಾಗಿರುತ್ತೇವೆ. 2 ಮತ್ತು 3 ನೇ ಪ್ರತಿವಾದಿಯರು ನಮ್ಮ ಸ್ವಂತ ತಮ್ಮಂದಿರು. ನನ್ನ ತಂದೆ ತುಳಜಪ್ಪನವರು ಸುಮಾರು 10 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನನ್ನ ತಂದೆ ತುಳಜಪ್ಪನವರು 1994 ರಂದು ಮೃತಪಟ್ಟಿರುತ್ತಾರೆ ಎಂದರೆ ಸರಿ. ನನ್ನ ತಂದೆ ಮೃತಪಟ್ಟ ನಂತರ ನಾವಾಗಲೀ, 1 ರಿಂದ 3 ನೇ ಪ್ರತಿವಾದಿಯರಾಗಲೀ ಕೂಡಿ ವಾಸವಾಗಿಲ್ಲ ಎಂದರೆ ಸರಿ. ನನ್ನ ತಂದೆ ಜೀವಂತವಿರುವಾಗಲೇ ದಾವಾ ಆಸ್ತಿಗಳಲ್ಲಿ ಹಿಸ್ಸೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ–3 ಮತ್ತು 4 ರ ಆಸ್ತಿಗಳು ನನ್ನ ತಂದೆ ಹೆಸರಿನಲ್ಲಿದೆ. ದಾವಾ ಅನುಸೂಚಿ–5 ಮತ್ತು 6 ರ ಆಸ್ತಿಗಳು ಯಾರ ಹೆಸರಿನಲ್ಲಿವೆ ಗೊತ್ತಿಲ್ಲ. ದಾವಾ ಅನುಸೂಚಿ–5 ಮತ್ತು 6 ರ ಆಸ್ತಿಗಳು ಪ್ರತಿವಾದಿ 2 ಮತ್ತು 3 ರವರ ಹೆಸರಿನಲ್ಲಿವೆ ಎಂದರೆ ಸಾಕ್ಷಿಯು ಸಾಮೂಹಿಕವಾಗಿ ಇವೆ ಎಂದು ಸ್ವತಃ ನುಡಿಯುತ್ತಾರೆ. ದಾವಾ ಆಸ್ತಿಗಳು ನನ್ನ ತಂದೆ ಹೆಸರಿನಲ್ಲಿ ಮತ್ತು ಸಾಮೂಹಿಕವಾಗಿ ಇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ –1 ರ ಆಸ್ತಿ ಸಹ 1 ರಿಂದ 3 ನೇ ಪ್ರತಿವಾದಿಗಳ ನಡುವೆ ಹಿಸ್ಸೆ ಆಗಿ ಪ್ರತ್ಯೇಕ ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ 2 ರ ಆಸ್ತಿ 1 ನೇ ಪ್ರತಿವಾದಿಯ ತಾಯಿ ದ್ಯಾಮವ್ವಳ ಸ್ವಯಾರ್ಜಿತವಾದ ಆಸ್ತಿ ಎಂದರೆ ಸರಿಯಲ್ಲ.

(**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿದಾರರ ಸಹಿ

ಹಾನಗಲ್